ಸಾಲರೂಪವಾಗಿ (ಉಳಿದ ನಗರ ಸಭೆಗಳಿಗೆ ಒದಗಿಸಿದಂತೆ) ಬೈಲಹೊಂಗಲ ಪುರಸಭೆಗೆ ಒದಗಿಸಲು ಸರ್ಕಾರ ಸಹಾಯ ಮಾಡುವುದೇ

ಉತ್ತರ

1 ಬಂದಿಲ್ಲ

2 ಸದ್ಯಕ್ಕೆ ಅಂತಹ ಪ್ರಸ್ತಾವನೆಯು ಇರುವುದಿಲ್ಲ

3 ಉದ್ಭವಿಸುವುದಿಲ್ಲ

ಪಟ್ಟಣ ಪಂಚಾಯಿತಿಗಳಿಗೆ ಮೂಲಭೂತ ಸೌಲಭ್ಯ ಒದಗಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 101(399)

ಸದಸ್ಯರ ಹೆಸರು ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ತುರುವೇಕೆರೆ)

ಉತ್ತರಿಸುವ ಸಚಿವರು ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ಪಟ್ಟಣ ಪಂಚಾಯತಿಗಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯವೇನು?

ಆ) ರಸ್ತೆ ಒಳಚರಂಡಿ, ಬೀದಿದೀಪ ಇತ್ಯಾದಿ ಸೌಕರ್ಯಗಳನ್ನು ಸರ್ಕಾರ ಒದಗಿಸಬಹುದೆ?

ಇ) ತೆರಿಗೆಯನ್ನು ವಸೂಲಿ ಮಾಡಿ ಕಾರ್ಯಭಾರ ಮಾಡಲಾಗುವುದೆ?

ಈ) ಕೆಲಸಗಾರರಿಗೆ ಸಂಬಳ ಎಲ್ಲಿಂದ ಕೊಡಲಾಗುವುದು?

ಉತ್ತರ

ಅ) ಎನ್ ಎಫ್ ಸಿ ಹತ್ತನೇ ಹಣಕಾಸು ಆಯೋಗ ಮುಂತಾದ ಯೋಜನೆಗಳ ಅಡಿಯಲ್ಲಿ ಅನುದಾನ ನೀಡಲಾಗುತ್ತಿದೆ

ಆ) ಅವಕಾಶವಿರುವುದಿಲ್ಲ

ಇ) ಹೌದು

ಈ) ಎಸ್ ಎಫ್ ಸಿ ಅನುದಾನ ಹಾಗೂ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯಿಂದ

ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಕಾಮಗಾರಿಗಳ ಗುಣಮಟ್ಟ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 102(457)

ಸದಸ್ಯರ ಹೆಸರು ಶ್ರೀ ಪಾಟೀಲ್ ಜೆ.ಟಿ (ಬೀಳಗಿ)

ಉತ್ತರಿಸುವ ಸಚಿವರು ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ಕರ್ನಾಟಕ ರಾಜ್ಯದಲ್ಲಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳಲ್ಲಿ ಹುಡ್ಕೋ ಯೋಜನೆ ಅಡಿಯಲ್ಲಿ ಪ್ರಾರಂಭಿಸಲಾದ ಕಾಮಗಾರಿ ಗುಣಮಟ್ಟವನ್ನು ಕಾಪಾಡಲಾಗಿದೆಯೇ?

ಆ) ಗುಣಮಟ್ಟ ಕಾಪಾಡುವ ಜವಾಬ್ದಾರಿ ಸ್ಥಳೀಯ ಸಂಸ್ಥೆಗಳಿಗೆ ಇಲ್ಲವೇ?

ಇ) ಮುಖ್ಯ ಗುತ್ತಿಗೆದಾರರನ್ನು ಬೇರೆಯವರಿಗೆ ಸಬ್ ಕಂಟ್ರಾಕ್ಟ್ ಕೊಡಲು ಈ ಕೆಲಸಗಳಲ್ಲಿ ಅವಕಾಶವಿದೆಯೇ?

ಉತ್ತರ

ಅ) ಹೌದು

ಆ) ಗುಣಮಟ್ಟ ಕಾಪಾಡುವ ಜವಾಬ್ದಾರಿ ಸ್ಥಳೀಯ ಸಂಸ್ಥೆಗಳಿಗೂ ಇರುತ್ತದೆ

ಇ) ಇಲ್ಲ, ಗುತ್ತಿಗೆದಾರರು ಸ್ಥಳೀಯ ಕೂಲಿಗಾರರ ಮೂಲಕ ಕೆಲಸ ನಿರ್ವಹಿಸುತ್ತಿದ್ದಾರೆ

ಧಾರವಾಡ-ಹುಬ್ಬಳ್ಳಿ ಮಹಾನಗರ ಪಾಲಿಕೆಗಳ ಯೋಜನೆಗಳ ವಿವರ